


**SARAYU** - Kannada Monthly Regn. No. KARKAN/2014/62363
**May Vol. : 11 Issue :12** 5127/ ವಿಶ್ವವಸು ಸಂವತ್ಸರ ಮೇ 2025 ಪುಟ 8 **Rs. 10/-**

Postal Regn No. PTR/136/2025-27
Licensed to Post without pre-payment
License No: SK/WPP/PTR/117/2025-27

# ಶ್ರೀರಾಮ ಪ್ರೌಢಶಾಲೆ

ಹನುಮಾನ್ ನಗರ ಕಲ್ಲಡ್ಕ, ಬಂಟ್ವಾಳ ತಾಲೂಕು 574222

## ಎಸ್.ಎಸ್.ಎಲ್.ಸಿ. ಫಲಿತಾಂಶ : 2024-25

| ವಿಶಿಷ್ಟ ಶ್ರೇಣಿ | ಪ್ರಥಮ ಶ್ರೇಣಿ |
|---|---|
| 51 | 152 |



620/625

ತನುಶ್ರೀ ದೇವಾಡಿಗ

125ರಲ್ಲಿ 125
ಸಂಸ್ಕೃತ – 21
100ರಲ್ಲಿ 100
ಗಣಿತ – 3
ಇಂಗ್ಲೀಷ್ –1
ತೃ.ಕನ್ನಡ – 6
ಹಿಂದಿ – 2
ಸಮಾಜ – 1

ರಾಜ್ಯದಲ್ಲಿ **6ನೇ** ರ್‍ಯಾಂಕ್ ಬಂಟ್ವಾಳ ತಾಲೂಕಿಗೆ ಪ್ರಥಮ

ಬಂಟ್ವಾಳ ತಾಲೂಕಿನಲ್ಲಿ ಶ್ರೀರಾಮ ಪ್ರೌಢಶಾಲೆ, ಕಲ್ಲಡ್ಕ ಸತತ ಎರಡನೇ ಬಾರಿಗೆ ಅತೀ ಹೆಚ್ಚು ಅಂಕ ಪಡೆದು ಪ್ರಥಮ ಸ್ಥಾನ ಪಡೆದಿದೆ.

## ವಿಶಿಷ್ಟ ಶ್ರೇಣಿ ಪಡೆದ ವಿದ್ಯಾರ್ಥಿಗಳು



ಸಿಂಚನಾ ವಿ 616, ಅನನ್ಯ 614, ಪ್ರೀತೇಶ್ 613, ಅನುಶ್ರೀ 609, ಕೀರ್ತಿ 607, ಸಿಂಚನ 606, ಭೂಮಿಕಾ 604, ಆರುಷ್ 603, ವಿಖ್ಯಾತ್ 602



ತರುಣ್ 595, ಶ್ರೀನಿವಾಸ 590, ದೀಕ್ಷಾ 590, ಪ್ರಣಾಮ್ 589, ನಮ್ರತ 589, ಸಾವನ್ 581, ದಿಗಂತ್ 580, ಕಾವೇರಿ 577, ಸ್ವಾತಿಕ್ 576



ಸೃಜನ್ 575, ಅಸ್ಮಿತಾ 575, ಧನುಶ್ 571, ಅನುಶ್ರೀ 570, ಸೌಮ್ಯ 564, ತುಷಾರ್ 562, ಜಿತೇಶ್ 562, ಸೌಮ್ಯ 561, ವೈಷ್ಣವಿ 559, ಧನುಶ್ರೀ 559, ಯಶ್ವಿತಾ 557, ಚೈತಾಲಿ 554



ಅನನ್ಯ 552, ಕುಮಾರ್‌ದೀಕ್ಷಿತ್ 551, ಭವಿತ್ 551, ಶ್ರೇಯಾ 548, ಚೇತನ್ 546, ಮಾನಸ 545, ಭುವನ್ 545, ಪ್ರಣಮ್ಯ 544, ದಿಗಂತ್ 543, ಅಖಿಲ್ 543, ಕುಶನ್ 540



ಜಿತೇಶ್ 538, ದಿಶಾ 537, ಹಂಶಿತಾ 536, ಅನುಷಾ 536, ಧ್ಯಾನ್ 535, ಸುಪ್ರೀತ್ 534, ತನ್ವಿತಾ 533, ಧನುಷ್ 533, ಹರ್ಷಿತ್ 531

**ಅಭಿನಂದನೆಗಳು**

ನಿಮ್ಮ ಭವಿಷ್ಯ ಉಜ್ವಲವಾಗಲಿ

– ಅಧ್ಯಕ್ಷರು, ಸಂಚಾಲಕರು, ಆಡಳಿತ ಮಂಡಳಿ, ಶಾಲಾ ಅಭಿವೃದ್ಧಿ ಸಮಿತಿ, ಮುಖ್ಯೋಪಾಧ್ಯಾಯರು, ಬೋಧಕ-ಬೋಧಕೇತರ ವೃಂದ ಹಾಗೂ ಹಿರಿಯ ವಿದ್ಯಾರ್ಥಿ ವೃಂದ

# ಶ್ರೀರಾಮ ಪದವಿಪೂರ್ವ ವಿದ್ಯಾಲಯ

ಹನುಮಾನ್ ನಗರ ಕಲ್ಲಡ್ಕ, ಬಂಟ್ವಾಳ ತಾಲೂಕು 574222

## ದ್ವಿತೀಯ ಪಿಯುಸಿ ಫಲಿತಾಂಶ 2024-25

ದೂರವಾಣಿ: 9141030981, 9449372150

**100%** ಕಲಾ ವಿಭಾಗ

ವಿಶಿಷ್ಟ ಶ್ರೇಣಿ: 54

ಪ್ರಥಮ ಶ್ರೇಣಿ: 198

ವಿಜ್ಞಾನ | ವಾಣಿಜ್ಯ | ಕಲಾ



ದೀಪ್ತಿ 582 | ಪ್ರಜ್ಞಾ 579 | ಮಾನಸ 534

### ವಿಶಿಷ್ಟ ಶ್ರೇಣಿಯಲ್ಲಿ ಉತ್ತೀರ್ಣರಾದವರು

**ವಿಜ್ಞಾನ ವಿಭಾಗ**



ಆಶಿಕಾ 576, ತನ್ವಿ 571, ಚಿನ್ಮಯಿ 567, ಪೂಜ್ಯಶ್ರೀ 567, ನಿಶಿತಾ 564



ಹರಿಪ್ರಿಯ 557, ಉದಯಕೃಷ್ಣ 556, ಪವಿತ್ರ 555, ಶ್ರೀಲತಾ 554, ಅಜಯ್ 548, ಮನಸ್ವಿ 544, ಚೈತ್ರ 542, ಪ್ರೀತಿ 536, ಶ್ರೀಲಕ್ಷ್ಮೀ 533, ದೀಕ್ಷಿತ್ 531



ಶ್ರಮಿಕಾ 531, ಚೈತ್ರ 525, ಶ್ರೇಯಾ 521, ಅಪೇಕ್ಷಾ 519, ಆತ್ಮೀ 518, ಚಿಂತನ 516, ಶಾಶ್ವತ್ 514, ಶ್ರೀಗೌರಿ 511, ಕೃತಿಕಾ 511

**ವಾಣಿಜ್ಯ ವಿಭಾಗ**



ಹರ್ಷಿತಾ 577, ಲಕ್ಷ್ಮೀ 574, ಅಂಜನ 571, ಭವಿತ್ 564, ಅನುಷ್ 562, ಜಯಂತಿ 556, ಅದಿತಿಲಕ್ಷ್ಮೀ 549, ದಿವ್ಯಶ್ರೀ 547, ಆದಿತ್ಯ 542, ಅನನ್ಯ 541



ತನುಶ್ರೀ 539, ಪ್ರತೀಕ್ಷಾ 534, ರಾಕಿವಾರ್ 533, ದೀಪ್ತಿ 533, ಅಶ್ವಿತಾ 533, ಧನ್ಯಶ್ರೀ 531, ಸಂಜನಾ 530, ಲತಾಶ್ರೀ 524, ಹರ್ಷಿತ್ 522, ಮೋಕ್ಷಾ 515



ಕಾವ್ಯ 513, ಶ್ರೇಯಸ್ 513, ದೀಪ್ತಿ 511

**ಕಲಾ ವಿಭಾಗ**



ಪೂಜಾಶ್ರೀ 533, ಪ್ರಜ್ಞಾ 517, ಅಂಕಿತ್ 514, ವಿರಾಜಿತ 510

**ಅಭಿನಂದನೆಗಳು**

ಅಧ್ಯಕ್ಷರು, ಸಂಚಾಲಕರು, ಆಡಳಿತ ಮಂಡಳಿ, ಶಿಕ್ಷಕ-ರಕ್ಷಕ ಸಂಘ, ಬೋಧಕ-ಬೋಧಕೇತರ ವೃಂದ ಹಾಗೂ ಹಿರಿಯ ವಿದ್ಯಾರ್ಥಿಗಳು

## ಸುಭಾಷಿತ ಮಂಜರಿ

**ಅಸಂಭವಂ ಹೇಮಮೃಗಸ್ಯ ಜನ್ಮ ತಥಾಪಿ**
**ರಾಮೋ ಲುಲುಭೇ ಮೃಗಾಯ । ಪ್ರಾಯಃ**
**ಸಮಾಸನ್ನಪರಾಭವಾಣಾಂ**
**ಧಿಯೋ ವಿಪರ್ಯಸ್ತತರಾ ಭವಂತಿ ।**

**ಸುವರ್ಣಮೃಗದ ಇರುವಿಕೆ ಅಸಂಭವ. ಆದರೂ ಶ್ರೀರಾಮನು ಅಂಥ ಮೃಗಕ್ಕಾಗಿ ಆಶಿಸಿದನು. ಸಾಮಾನ್ಯವಾಗಿ ಯಾರಿಗೆ ವಿಪತ್ತು ಸಮೀಪಿಸಿದೆಯೊ, ಅವರ ಬುದ್ಧಿ ವ್ಯಾಮೋಹಗೊಳ್ಳುತ್ತದೆ.**

### ಸಂಪಾದಕೀಯ

**ಏಪ್ರಿಲ್ ಮೇ ತಿಂಗಳ ಸಂಚಿಕೆ ಎಂದರೆ ಅದು ಶಾಲಾ ಫಲಿತಾಂಶದ ಸಂಚಿಕೆ ಎಂದೇ ಹೇಳಬಹುದು. ಈ ಬಾರಿಯೂ ಪಿಯುಸಿ ಹಾಗೂ ಎಸ್.ಎಸ್.ಎಲ್.ಸಿ ಫಲಿತಾಂಶಗಳು ನಮ್ಮ ನಿರೀಕ್ಷೆಯಂತೆಯೇ ಬಂದಿದ್ದು ಸಾಧಕರಿಗೆಲ್ಲ ಸರಯೂ ಬಳಗದಿಂದ ಅಭಿನಂದನೆಗಳು. ಕಳೆದ 45 ವರ್ಷಗಳ SSLC ಫಲಿತಾಂಶದಲ್ಲಿ ಇದೇ ಮೊದಲ ಬಾರಿಗೆ ಅತ್ಯಂತ ಹೆಚ್ಚು ಅಂಕ ಪಡೆದ ವಿದ್ಯಾರ್ಥಿನಿಗೆ ವಿಶೇಷವಾದ ಅಭಿನಂದನೆಗಳು. ಸಂಸ್ಥೆಯೊಂದು ಕೇವಲ ಅಂಕಗಳ ಹಿಂದೆ ಬೀಳದೆ ಸರ್ವ ಸಾಮಾನ್ಯ ವಿದ್ಯಾರ್ಥಿಯನ್ನು ವಿದ್ಯಾರ್ಥಿಗೆ ಪ್ರವೇಶಾತಿ ನೀಡಿ ಅವರಿಂದ ಉತ್ತಮ ಫಲಿತಾಂಶವನ್ನು ತರುವ ಪ್ರಯತ್ನದಲ್ಲಿ ತೊಡಗಿರುವುದರಿಂದ ಈ ಫಲಿತಾಂಶ ಸಮಾಧಾನ ತಂದಿದೆ. ಹೊಸ ಶೈಕ್ಷಣಿಕ ವರ್ಷ 2025–26ರ ದಾಖಲಾತಿಯ ಪ್ರಕ್ರಿಯೆ ನಡೆಯುತ್ತಿದ್ದು, ಹೊಸ ಶೈಕ್ಷಣಿಕ ವರ್ಷದಲ್ಲಿ ಆರಂಭಗೊಳ್ಳಲಿರುವ ಇಂಗ್ಲೀಷ್ ಮಾಧ್ಯಮ ವಿಭಾಗದಲ್ಲೂ ದಾಖಲಾತಿ ಪೂರ್ಣಗೊಂಡಿದೆ. ಹಾಗೂ ವಿದ್ಯಾರ್ಥಿಗಳ ಆಗಮನಕ್ಕೆ ಸನ್ನದ್ಧವಾಗಿದೆ**

**ಸಂಪಾದಕ ಬಳಗ**


### ಸಂಪಾದಕೀಯ ಮಂಡಳಿ

**ಸಂಪಾದಕರು, ಮುದ್ರಕರು ಹಾಗೂ ಪ್ರಕಾಶಕರು :**
ನಾರಾಯಣ ಸೋಮಯಾಜಿ
ಅಧ್ಯಕ್ಷರು, ಶ್ರೀರಾಮ ವಿದ್ಯಾಕೇಂದ್ರ
**ಕಾರ್ಯನಿರ್ವಾಹಕ ಸಂಪಾದಕರು :**
ಕೃಷ್ಣಪ್ರಸಾದ ಕಾಯರ್‌ಕಟ್ಟೆ
**ಸಹಸಂಪಾದಕರು :**
ಶ್ರೀಮತಿ (ಶಿಶುಮಂದಿರ)
ಚೈತ್ರಾ (ಪ್ರಾಥಮಿಕ ಶಾಲೆ)
ಮೇಘಶ್ರೀ (ಪ್ರೌಢಶಾಲೆ)
ಶ್ವೇತಾ (ಪಿಯುಸಿ)
ಸೌಮ್ಯ (ಸೆಕೆಂಡರಿ ಸ್ಕೂಲ್)
ರಶ್ಮಿತಾ (ಪದವಿ)
**ವ್ಯವಸ್ಥಾಪಕ ಸಂಪಾದಕರು :** ಕುಶಾಲಪ್ಪ ಅಮ್ಟೂರು


## ಶ್ರೀರಾಮ ಶಿಶುಂದಿರದ ವತಿಯಿಂದ ವಿವಿದ ಕಡೆಗಳಲ್ಲಿ ಬಾಲಗೋಕುಲ 5.4.2025 ರಿಂದ 8.04.2025ರವರೆಗೆ



ಶ್ರೀ ಸಿದ್ಧಿವಿನಾಯಕ ಬಾಲಗೋಕುಲ ತುಳಸೀವನ, ಶ್ರೀಕೃಷ್ಣ ಬಾಲಗೋಕುಲ ಅಮ್ಟೂರು, ಶ್ರೀಕೃಷ್ಣ ಶಿಶುಮಂದಿರ ಸಜೀಪ ಇಲ್ಲಿ ಬಾಲಗೋಕುಲ ಶಿಬಿರವು 'ಬೆಳಕು' ಎಂಬ ಹೆಸರಿನ ಶೀರ್ಷಿಕೆಯಡಿ ನೆರವೇರಿತು. ಶಿಬಿರದಲ್ಲಿ ಕಂಠಪಾಠ, ಕ್ರಾಫ್ಟ್, ರಂಗೋಲಿ ಮುಂತಾದ ಚಟುವಟಿಕೆಯನ್ನು ಮಾಡಿಸಲಾಯಿತು. ಆರೋಗ್ಯ ಮತ್ತು ಬೇಸಿಗೆಯಲ್ಲಿ ಯಾವ ರೀತಿಯ ಆಹಾರ ಮತ್ತು ಪಾನೀಯ ವನ್ನು ಹೇಗೆ ಸೇವಿಸಬೇಕೆಂದು ಮಾಹಿತಿ ನೀಡಲಾಯಿತು.

ದಿನಾಂಕ 08.04.2025 ರಂದು ಸಮಾರೋಪ ಕಾರ್ಯಕ್ರಮದಲ್ಲಿ ಮಾರ್ಗದರ್ಶಕರಾಗಿ ಶ್ರೀ ರವಿರಾಜ್ ಶ್ರೀಮಾನ್ ಇವರು ರಾಮ ಲಕ್ಷ್ಮಣರ ವನವಾಸದ ಕತೆಯನ್ನು ಹೇಳಿದರು. ನಂತರ ಪಾನೀಯ ಸೇವಿಸಿ ಎರೆಕಳ, ಭಯಂಕೇಶ್ವರ ದೇವಸ್ಥಾನದ ದೇವರ ದರ್ಶನ ಮಾಡಿ ಭಜನೆ ಹೇಳಿ ನಂತರ ಅನ್ನಪ್ರಸಾದ ಸ್ವೀಕರಿಸಿ ಅಲ್ಲಿಂದ ತೆರಳಿದೆವು. ಒಟ್ಟು 50 ಸಂಖ್ಯೆ ಮಕ್ಕಳು ಭಾಗವಹಿಸಿದ್ದರು. ಶಿಬಿರದ ಸಮಾರೋಪದಲ್ಲಿ ಶ್ರೀಮತಿ ಕಮಲಾ ಪ್ರ.ಭಟ್ ಉಪಸ್ಥಿತರಿದ್ದರು. ಶ್ರೀಗಣೇಶ ಶಿಶುಮಂದಿರ ಬೊಂಡಾಲ, ಸರಸ್ವತಿ ಶಿಶುಮಂದಿರ ಕೊಪ್ಪಲ ಕೋಡಿ ಹಾಗೂ ಅಕ್ಕಮಹಾದೇವಿ ಶಿಶುಮಂದಿರ ಅಜ್ಜಿಬೆಟ್ಟು ಬಿ. ಸಿ. ರೋಡ್ ಈ ಮೂರು ಕಡೆಗಳಲ್ಲಿ ವಸಂತ ಬಾಲಗೋಕುಲ ಶಿಬಿರವು ಮೂರು ದಿನ ನಡೆಯಿತು. ಶಿಬಿರದಲ್ಲಿ ಮಕ್ಕಳಿಗೆ ಕಬೀರನ ದೋಹೆ, ಮಂಕುತಿಮ್ಮನ ಕಗ್ಗ, ವಚನ, ದೇಶಭಕ್ತಿ ಗೀತೆ, ರಸಪ್ರಶ್ನೆ, ಹಾಗೂ ಕ್ರಾಫ್ಟ್, ರಂಗೋಲಿ ಹಾಕುವುದು, ವಿವಿಧ ಹೊರಾಂಗಣ ಆಟಗಳು, ಮತ್ತು ಅಭಿನಯ ಗೀತೆಗಳನ್ನು ಹೇಳಿಕೊಡಲಾಯಿತು. ಶಿಬಿರದ ಸಮಾರೋಪದ ದಿನ ಮಕ್ಕಳನ್ನು ಭಯಂಕೇಶ್ವರ ದೇವಸ್ಥಾನ ಮತ್ತು ಕಾರಿಂಜ ದೇವಸ್ಥಾನಕ್ಕೆ ಕರೆದುಕೊಂಡು ಹೋಗಲಾಯಿತು. ಒಟ್ಟು 70 ಮಕ್ಕಳು ಭಾಗವಹಿಸಿದ್ದರು.





## ಈಜು ಶಿಬಿರ 01.04.2025 ರಿಂದ 11.04.2025



ವಿದ್ಯಾಕೇಂದ್ರದಲ್ಲಿ ಶಿಶು ಮಂದಿರ ಹಾಗೂ ಪ್ರಾಥಮಿಕ ವಿಭಾಗದ ವಿದ್ಯಾರ್ಥಿಗಳ ಈಜು ಶಿಬಿರವನ್ನು ಡಾ.ಪ್ರಭಾಕರ ಭಟ್ ಕಲ್ಲಡ್ಕ ಇವರು ದೀಪ ಬೆಳಗಿಸಿ ಉದ್ಘಾಟಿಸಿ ಶುಭ ಹಾರೈಸಿದರು. ರಾಷ್ಟ್ರಮಟ್ಟದ ಈಜು ತರಬೇತುದಾರರು ಹಾಗೂ ಸಮುದ್ರದಲ್ಲಿ ಈಜು ತರಬೇತಿ ನೀಡುತ್ತಿರುವವರು ಶ್ರೀ ಬಿ.ಕೆ. ನಾಯಕ್, ರಾಜ್ಯಮಟ್ಟದ ಈಜು ಪಟು, ತಾಲೂಕು ಪಂಚಾಯತಿನ ಸಿಬ್ಬಂದಿ ಶ್ರೀ ಅಶೋಕ್ ಬರಿಮಾರು. ಸಮುದ್ರ ಈಜುಗಾರರಾದ ಶ್ರೀ ಪ್ರತಾಪ್ ಕುಮಾರ್ ಉಪಸ್ಥಿತರಿದ್ದು, ಶೀಬಿರಾರ್ಥಿಗಳಿಗೆ ಈಜು ತರಬೇತಿ ನೀಡಿದರು. ಉದ್ಯಮಿ ಮುಂಬೈಯ ಶ್ರೀ ಬಾಲಕೃಷ್ಣ ಭಂಡಾರಿ, ಹಾಗೂ ಮುಖ್ಯೋಪಾಧ್ಯಾಯರಾದ ಶ್ರೀ ರವಿರಾಜ್ ಕಣಂತೂರು, ಪೋಷಕರು ಹಾಗೂ ಅಧ್ಯಾಪಕ ವೃಂದದವರು ಉಪಸ್ಥಿತರಿದ್ದರು.

## ಈಜು ಶಿಬಿರ ಸಮಾರೋಪ ಸಮಾರಂಭ : 11.04.2025

ಶಿಬಿರದ ಸಮಾರೋಪ ಸಮಾರಂಭದಲ್ಲಿ ವಿದ್ಯಾಕೇಂದ್ರದ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಹಾಗೂ ಶ್ರೀರಾಮ ಪದವಿ ವಿಭಾಗದ ಪ್ರಾಂಶುಪಾಲರಾದ ಶ್ರೀ ಕೃಷ್ಣಪ್ರಸಾದ್ ಕಾಯರ್ ಕಟ್ಟೆ ಇವರು ಮಾತನಾಡಿ ಈಜು ಬಗ್ಗೆ ಮಾಹಿತಿ ನೀಡಿದರು. ಈಜು ತರಬೇತುದಾರರಾದ ಶ್ರೀ ಬಿ



ಕೆ ನಾಯಕ್, ಶ್ರೀ ಅಶೋಕ್ ಬರಿಮಾರು, ಕುಮಾರಿ ಅನನ್ಯ ಮತ್ತು ಕುಮಾರಿ ಅನರ್ಘ್ಯ ಇವರಿಗೆ ಶಾಲು ಫಲಪುಷ್ಪದೊಂದಿಗೆ ಗೌರವ ಸಮರ್ಪಿಸಲಾಯಿತು. ಭಾಗವಹಿಸಿದ ಎಲ್ಲಾ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರವನ್ನು ವಿತರಿಸಲಾಯಿತು. ವಿದ್ಯಾಕೇಂದ್ರದ ಸಹಸಂಚಾಲಕರಾದ ಶ್ರೀ ರಮೇಶ್ ಎನ್, ಉಪಸ್ಥಿತರಿದ್ದರು. .

## ಬಾಲಕಿಯರ ಸಂಸ್ಕೃತಿ ಶಿಕ್ಷಣ ಶಿಬಿರ 02.04.2025 ರಿಂದ 10.04.205

ಜನಕಲ್ಯಾಣ ಟ್ರಸ್ಟ್ ( ರಿ) ನರಿಕೊಂಬು ಇದರ ವತಿಯಿಂದ ನಾಟಿಯಲ್ಲಿ ನಡೆದ ಬಾಲಕಿಯರ ಸಂಸ್ಕೃತಿ ಶಿಕ್ಷಣ ಶಿಬಿರದಲ್ಲಿ ಪ್ರಾಥಮಿಕ ವಿಭಾಗದ ವಿದ್ಯಾರ್ಥಿನಿಯರಾದ ವೈದೇಹಿ, ಅನರ್ಘ್ಯ, ಪೂರ್ವಿ, ಆರಾಧ್ಯಾ, ಧಾತ್ರಿಕಾ, ಸಾನ್ವಿ ನೆಟ್ಲ, ಹಿತಾ, ಪ್ರಣಮ್ಯ, ಸಾನ್ವಿ ಭಾಗವಹಿಸಿದರು.

**ದಿನಾಂಕ 16.04.2025 ರಿಂದ 28.05.2025ರವರೆಗೆ ನಡೆದ ಬಾಲಕರ ಸಂಸ್ಕೃತಿ ಶಿಕ್ಷಣ** ಶಿಬಿರದಲ್ಲಿ ಪ್ರಾಥಮಿಕ ವಿಭಾಗದ ವಿದ್ಯಾರ್ಥಿಗಳಾದ ದಿಶಾಂತ್, ವೈಭವ್, ಭರತ್, ನಿಶಾನ್, ಪ್ರಣಾಮ್, ನಿರುಪಮ್, ಹರ್ಷಿತ್, ಗೌರಿ ಗಣೇಶ್, ಯುವನ್ ಪ್ರಕಾಶ್, ನಿತಿನ್, ಅಕ್ಷಯ್, ಚಿರಾಗ್, ಮೋಕ್ಷಿತ್, ಭಾಗವಹಿಸಿದರು.

## ವಾರ್ಷಿಕ ಅವಲೋಕನ ಬೈಠಕ್ 22.04.2025



2024–25ನೇ ಶೈಕ್ಷಣಿಕ ವರ್ಷದ ವಾರ್ಷಿಕ ಅವಲೋಕನ ಬೈಠಕ್ ಡಾ। ಪ್ರಭಾಕರ್ ಭಟ್ ಕಲ್ಲಡ್ಕ ಇವರ ಮಾರ್ಗದರ್ಶನದಲ್ಲಿ ನಡೆಯಿತು. ಆಡಳಿತ ಮಂಡಳಿಯ ಅಧ್ಯಕ್ಷರಾದ ಶ್ರೀ ನಾರಾಯಣ ಸೋಮಯಾಜಿ, ಸಂಚಾಲಕರಾದ ಶ್ರೀ ವಸಂತ ಮಾಧವ, ಸಹಸಂಚಾಲಕರಾದ ಶ್ರೀ ರಮೇಶ್ ಎನ್, ಸಿ.ಇ.ಓ ಶ್ರೀ ಕೃಷ್ಣ ಪ್ರಸಾದ್ ಕಾಯರ್ ಕಟ್ಟೆ, ಆಡಳಿತ ಮಂಡಳಿ ಸದಸ್ಯರಾದ ಶ್ರೀಮತಿ ಮಲ್ಲಿಕಾ ಶೆಟ್ಟಿ ಹಾಗು ವಿಭಾಗ ಮುಖ್ಯಸ್ಥರು ಉಪಸ್ಥಿತರಿದ್ದರು

## ದಕ್ಷಿಣ ಕನ್ನಡ ಜಿಲ್ಲಾ ಸಮೀಕ್ಷಾ ಯೋಜನ ಬೈಠಕ್ 05.04.2025

ವಿದ್ಯಾಭಾರತಿ ದಕ್ಷಿಣ ಕನ್ನಡ ಜಿಲ್ಲಾ ಸಮೀಕ್ಷಾ ಯೋಜನಾ ಬೈಠಕ್ ಶ್ರೀರಾಮ ಪ್ರಾಥಮಿಕ ಶಾಲೆಯಲ್ಲಿ ನಡೆಯಿತು. ಈ ಮೊದಲೇ ಯೋಜಿಸಿದ ಕಾರ್ಯಗಳ ಅನುಷ್ಠಾನ ಹಾಗೂ ಪ್ರಗತಿ ಬಗ್ಗೆ ಚರ್ಚೆ ಹಾಗು 2025–26ನೆ ಶೈಕ್ಷಣಿಕ ಯೋಜನೆಯ ಕುರಿತು ಚರ್ಚಿಸಲಾಯಿತು. ವೇದಿಕೆಯಲ್ಲಿ ವಿದ್ಯಾಭಾರತಿ ಕರ್ನಾಟಕ ಪ್ರಾಂತ ಉಪಾಧ್ಯಕ್ಷರು, ದೈಹಿಕ ನೈತಿಕ ಆಧ್ಯಾತ್ಮಿಕ ಶಿಕ್ಷಣ ಪ್ರಮುಖರು ಆಗಿರುವ ಶ್ರೀ ಶ್ರೀಪತಿ ಕಲ್ಲೂರಾಯ, ಮೈಸೂರು ವಿದ್ಯಾಭಾರತಿ ಕರ್ನಾಟಕ ಪ್ರಾಂತ ಕಾರ್ಯದರ್ಶಿ ಶ್ರೀ ವಸಂತ ಮಾಧವ, ವಿವೇಕಾನಂದ ವಿದ್ಯಾವರ್ಧಕ ಸಂಘ ಪುತ್ತೂರು ಇದರ ಸಹ ಕಾರ್ಯನಿರ್ವಹಣಾ ಅಧಿಕಾರಿ ಶ್ರೀ ವೆಂಕಟರಮಣ



ಹಾಗೂ ವಿದ್ಯಾಭಾರತಿ ದಕ್ಷಿಣ ಕನ್ನಡ ಜಿಲ್ಲಾ ಕಾರ್ಯದರ್ಶಿ, ಶಕ್ತಿ ರೆಸಿಡೆನ್ಸಿ ಸ್ಕೂಲ್ ಇಲ್ಲಿನ ಆಡಳಿತ ಮುಖ್ಯ ಸಲಹೆಗಾರರಾದ ಶ್ರೀ ರಮೇಶ್ ಕೆ ಹಾಗೂ ಜಿಲ್ಲಾ ಪದಾಧಿಕಾರಿಗಳು, ಜಿಲ್ಲಾ ಸಂಸ್ಥೆಯ ಪ್ರಧಾನಾಚಾರ್ಯರು ಉಪಸ್ಥಿತರಿದ್ದರು.

**ವೃತ್ತಿಪರ ಮಾರ್ಗದರ್ಶನ ಕಾರ್ಯಕ್ರಮ 2.4.25:**




ಶ್ರೀರಾಮ ಪ್ರಥಮದರ್ಜೆ ಕಾಲೇಜು ಕಲ್ಲಡ್ಕ ಇಲ್ಲಿ ವೃತ್ತಿಪರ ಮಾರ್ಗದರ್ಶನ ಕಾರ್ಯಕ್ರಮವು ನಡೆಯಿತು. ಈ ಕಾರ್ಯಕ್ರಮದಲ್ಲಿ ಸಂಸ್ಥೆಯ ಶಾಖಾ ಮುಖ್ಯಸ್ಥರಾದ ವಿಜಯೇಂದ್ರ ಭಾಗವಹಿಸಿ, ಮಾಹಿತಿಯನ್ನು ನೀಡಿದರು. ವೇದಿಕೆಯಲ್ಲಿ ಸಂಯೋಜಕರಾದ ದೀಕ್ಷಿತಾ ಉಪಸ್ಥಿತರಿದ್ದರು. ತೃತೀಯ ಬಿಕಾಂ ವಿದ್ಯಾರ್ಥಿನಿಯಾದ ವಿಸ್ಮಿತಾ ನಿರೂಪಿಸಿದರು.

**ವೃತ್ತಿಪರ ಮಾರ್ಗದರ್ಶನ ಕಾರ್ಯಕ್ರಮ 2.4.25 :**




ಐಎಎಂ ಸಂಸ್ಥೆಯು ನೀಡುವ ಪ್ರಮಾಣಿತ ನಿರ್ವಹಣಾ ಲೆಕ್ಕಪತ್ರದ (CMA) ಕೋರ್ಸ್ ಪರಿಚಯಿಸಲು ವೃತ್ತಿಪರ ಮಾರ್ಗದರ್ಶನ ಕಾರ್ಯಕ್ರಮವನ್ನು ಆಯೋಜಿಸಿತ್ತು. ಈ ಕಾರ್ಯಕ್ರಮದಲ್ಲಿ ಐಎಎಂ ಸಂಸ್ಥೆಯ ಶಾಖಾ ಮುಖ್ಯಸ್ಥರಾದ ವರ್ಶಿತಾ ಸಾಲಿಯನ್ CMA ಕೋರ್ಸ್ ಕುರಿತು ಪ್ರಮುಖ ಮಾಹಿತಿಯನ್ನು ನೀಡಿದರು. ಕಾರ್ಯಕ್ರಮವನ್ನು ವೃತ್ತಿಪರ ಮಾರ್ಗದರ್ಶನ ಮತ್ತು ಉದ್ಯೋಗಾಂಶ ವಿಭಾಗದ ಸಂಯೋಜಕರಾದ ದೀಕ್ಷಿತಾ ಅವರು ಸಮನ್ವಯಗೊಳಿಸಿದರು. ಐಎಎಂ ಸಂಸ್ಥೆಯ ಮಾರ್ಕೆಟಿಂಗ್ ಮುಖ್ಯಸ್ಥರಾದ ಶ್ರೀ ಧೀರಜ್ ಅವರು ಕೂಡ ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು. ಅಂತಿಮ ವರ್ಷದ ಬಿಕಾಂ ವಿದ್ಯಾರ್ಥಿನಿಯಾದ ಮನ್ವಿತಾ ಕಾರ್ಯಕ್ರಮವನ್ನು ನಿರ್ವಹಿಸಿದರು..

**ವ್ಯಕ್ತಿತ್ವ ವಿಕಸನ ಮತ್ತು ವಿದ್ಯಾಭ್ಯಾಸದಲ್ಲಿನ ಅವಕಾಶಗಳ ಬಗೆಗೆ ಮಾಹಿತಿ : 5.4.25**

ಸರಕಾರ ಹಮ್ಮಿಕೊಂಡಿರುವ ವೃತ್ತಿ ಮಾರ್ಗದರ್ಶನ ಕಾರ್ಯಕ್ರಮದಡಿಯಲ್ಲಿ ಸರಕಾರಿ ಪ್ರೌಢಶಾಲೆ ಕಡೇಶಿವಾಲಯ ಇಲ್ಲಿ ಆಂಗ್ಲ ಭಾಷಾ ಉಪನ್ಯಾಸಕರಾದ ಧನಂಜಯ ಇವರು 8 ಮತ್ತು 9ನೇ ತರಗತಿಯ ವಿದ್ಯಾರ್ಥಿಗಳಿಗೆ ವ್ಯಕ್ತಿತ್ವ ವಿಕಸನ ಮತ್ತು ವಿದ್ಯಾಭ್ಯಾಸದಲ್ಲಿ ಅವರಿಗಿರುವ ಅವಕಾಶಗಳ ಬಗೆಗೆ ಮಾಹಿತಿಯನ್ನು ನೀಡಿ–ದರು.

**ಯುಗಾದಿ ಉತ್ಸವ ಕಾರ್ಯಕ್ರಮದಲ್ಲಿ ಭಾಗಿ: 5.4.25**

ಕರ್ನಾಟಕ ರಾಜ್ಯ ಮಹಾವಿದ್ಯಾಲಯ ಶಿಕ್ಷಕ ಸಂಘ (ರಿ) ಇದರ ವತಿಯಿಂದ ಯುಗಾದಿ ಉತ್ಸವ ವನ್ನು ಎಂಜಿಮ್ ಕಾಲೇಜು ಉಡುಪಿ ಇಲ್ಲಿ ನಡೆಸಿದ್ದು ಅದರಲ್ಲಿ ನಮ್ಮ ಕಾಲೇಜಿನಿಂದ ಜಯಲಕ್ಷ್ಮಿ ಮಾತಾಜಿ ಮತ್ತು ಸಹನಾ ಮಾತಾಜಿ ಭಾಗವಹಿಸಿತ್ತಾರೆ.

**ತಂತ್ರೋತ್ಸವ ವಿಷಯದ ಕುರಿತಾಗಿ ಮಾಹಿತಿ: 9.4.25**

ಪುತ್ತೂರಿನ ವಿವೇಕಾನಂದ ಇಂಜಿನಿಯರಿಂಗ್ ಕಾಲೇಜಿನಲ್ಲಿ ತಂತ್ರೋತ್ಸವ ವಿಷಯದ ಕುರಿತಾಗಿ ದ್ವಿತೀಯ ಬಿಸಿಎ ವಿದ್ಯಾರ್ಥಿಗಳಿಗೆ ಮಾಹಿತಿ ಮತ್ತು ರಸಪ್ರಶ್ನೆ ಕಾರ್ಯಕ್ರಮವನ್ನು ಆಯೋಜಿಸಿಲಾಗಿ ವಿದ್ಯಾರ್ಥಿಗಳು ಮತ್ತು ಉಪನ್ಯಾಸಕರು ಸಕ್ರೀಯವಾಗಿ ಭಾಗವಹಿಸಿದರು.

**Logistics service ಗೆ ಭೇಟಿ :12.4.2025**




ಪ್ರಥಮ ಹಾಗೂ ದ್ವಿತೀಯ ವರ್ಷದ ಬಿ.ಕಾಂನ ಒಟ್ಟು 50 ವಿದ್ಯಾರ್ಥಿಗಳು ಹಾಗೂ 4 ಉಪನ್ಯಾಸಕರು VRL ಕುಳೂರ್ ಮಂಗಳೂರು ಇಲ್ಲಿರುವ logistics serviceಗೆ ಭೇಟಿ ನೀಡಿ ಅಲ್ಲಿನ ಕಾರ್ಯ ವೈಖರಿಯನ್ನು ವೀಕ್ಷಿಸಿದರು.

**ಸಮೂಹಗೀತೆ ಸ್ಪರ್ಧೆ ದ್ವಿತೀಯ ಸ್ಥಾನ : 9.4.25**

ರಂದು ಖಅಖ ಉರ್ವ ಕಾಲೇಜು ಮಂಗಳೂರು ಇಲ್ಲಿ ನಡೆದ ಸಮೂಹಗೀತೆ ಸ್ಪರ್ಧೆಯಲ್ಲಿ ಯತೀಶ್ ಆಚಾರ್ಯ. ಲಿಖಿತ್, ಸಾತ್ವಿಕ್, ಪದ್ಮ ಶ್ರೀ, ಶ್ರೀ ಗೌರಿ, ಚೈತ್ರ ಇವರು ದ್ವಿತೀಯ ಸ್ಥಾನವನ್ನು ಪಡೆದಿರುತ್ತಾರೆ.

**MOU ಪ್ರಮಾಣಪತ್ರ ಕೋರ್ಸುಗಳ ಕುರಿತಾಗಿ ಮಾಹಿತಿ : 07.04.2025**

ವೃತ್ತಿ ಮಾರ್ಗದರ್ಶನ ಕಾರ್ಯಕಮವನ್ನು ಆಯೋಜಿಸಿಲಾಗಿತ್ತು. ಬೆಂಗಳೂರಿನ Mentors for jids Foundation ಸಂಸ್ಥೆಯ ಅರ್ಪಣಾ ಭಟ್ ಇವರು ವೃತ್ತಿಪರ ಮಾರ್ಗದರ್ಶನ ಮತ್ತು MOU ಪ್ರಮಾಣಪತ್ರ ಕೋರ್ಸುಗಳ ಕುರಿತಾಗಿ ಮಾಹಿತಿಯನ್ನು ನೀಡಿದರು. ಕಾಲೇಜಿನ ಉಪಪ್ರಾಂಶುಪಾಲರಾದ ಶ್ರೀಮತಿ ಸುಕನ್ಯಾ ಮತ್ತು ಸಂಯೋಜಕಿ ಯಾದ ದೀಕ್ಷಿತಾ ಮಾತಾಜಿ ಉಪಸ್ಥಿತರಿದ್ದರು. ಜಯಸೂರ್ಯ ಪ್ರಥಮ ಬಿಸಿಎ ಸ್ವಾಗತಿಸಿ, ವಿನಮ್ರ ಪ್ರಥಮ ಬಿಕಾಂ ವಂದಿಸಿ, ಪೂಜಾ ತೃತೀಯ ಬಿಕಾಂ ನಿರೂಪಿಸಿದರು.

**ರಾಣಿ ಅಬ್ಬಕ್ಕ ಬಹುಮುಖ ಚಿಂತನೆ ವಿಚಾರಗೋಷ್ಠಿ ಕಾರ್ಯಕ್ರಮದಲ್ಲಿ ಭಾಗಿ : 18–04–2025**



ರಾಣಿ ಅಬ್ಬಕ್ಕ ತುಳು ಅಧ್ಯಯನ ಕೇಂದ್ರ, ಸಂಚಯಗಿರಿ, ಬಿ.ಸಿ ರೋಡ್ ಇಲ್ಲಿ ರಾಣಿ ಅಬ್ಬಕ್ಕ ಬಹುಮುಖ ಚಿಂತನೆ ವಿಚಾರಗೋಷ್ಠಿ ನಡೆಯಿತು. ಈ ವಿಚಾರಗೋಷ್ಠಿಯಲ್ಲಿ ಶ್ರೀರಾಮ ಪ್ರಥಮ ದರ್ಜೆ ಕಾಲೇಜು, ಕಲ್ಲಡ್ಕ ಇಲ್ಲಿನ ಮಾನವಿಕ ಸಂಘದ ನಿರ್ದೇಶಕರಾದ ಶ್ರೀಮತಿ ಆಶಾಲತಾ ಮಾತಾಜಿ ಮತ್ತು ಕಲಾ ವಿಭಾಗದ ಮೂವರು ವಿದ್ಯಾರ್ಥಿಗಳು ಭಾಗವಹಿಸಿದರು.

**ರಾಜ್ಯ ಮಟ್ಟದ ಪ್ರಬಂಧ ಸ್ಪರ್ಧೆಯಲ್ಲಿ ದ್ವಿತೀಯ ಬಹುಮಾನ ಮತ್ತು ನಗದು ಪುರಸ್ಕಾರ: 29.4.25**



ರಂದು ಶಿವರಾಮ ಕಾರಂತರ ಚೋಮನ ದುಡಿ ವಿಷಯಾಧಾರಿತ ರಾಜ್ಯ ಮಟ್ಟದ ಪ್ರಬಂಧ ಸ್ಪರ್ಧೆಯಲ್ಲಿ ಪದ್ಮಶ್ರೀ ತೃತೀಯ ಬಿಎ ಇವರು ವಿವೇಕಾನಂದ ಕಾಲೇಜು ಪುತ್ತೂರು ಇಲ್ಲಿ ದ್ವಿತೀಯ ಬಹುಮಾನ ಮತ್ತು 2000ರೂ ನಗದು ಪುರಸ್ಕಾರವನ್ನು ಪಡೆದುಕೊಂಡಿರುತ್ತಾಳೆ.

**ಸ್ವಚ್ಛತಾ ಅಭಿಯಾನದ ಕಾರ್ಯಕ್ರಮ : 28.4.25**

ಬಾಳ್ತಿಲ ಪಂಚಾಯತ್ ಮತ್ತು ಶ್ರೀರಾಮ ಪದವಿ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆಯ ಸಂಯುಕ್ತ ಆಶ್ರಯದಲ್ಲಿ ಬಾಳ್ತಿಲ ಪಂಚಾಯತ್ ವ್ಯಾಪ್ತಿಯಲ್ಲಿ ರಸ್ತೆಯ ಎರಡೂ ಬದಿಗಳಲ್ಲಿ ಸ್ವಚ್ಛತಾ ಅಭಿಯಾನದ ಕಾರ್ಯಕ್ರಮ ನಡೆಯಿತು 63 NSS ವಿದ್ಯಾರ್ಥಿಗಳು, ಬಾಳ್ತಿಲ ಪಂಚಾಯತ್ ಅಧ್ಯಕ್ಷ ಚಂದ್ರಶೇಖರ ಚೆಂಡೆ, ಪಂಚಾಯತ್ ಅಧಿಕಾರಿಗಳು, ಹಸಿರು ಸೇನೆ ಕಾರ್ಯಕರ್ತರು, ಆಶಾ ಕಾರ್ಯಕರ್ತರು, ರಾಷ್ಟ್ರಿಯ ಸೇವಾ ಯೋಜನೆಯ ಯೋಜನಾಧಿಕಾರಿ ಯತಿರಾಜ್ ಪಿ, ಸಹ ಯೋಜನಾಧಿಕಾರಿ ವರ್ಷ , ದೀಕ್ಷಿತ, ಧನಂಜಯ ಉಪಸ್ಥಿತರಿದ್ದರು.

**ಪ್ರದೀಪ್ತ ಸಾಂಸ್ಕೃತಿಕ ಸಂಘದ ವತಿಯಿಂದ ಆಕರ್ಷಕ ಸ್ಪರ್ಧೆಗಳು:**



ಕಾಲೇಜು ವಾರ್ಷಿಕೋತ್ಸವದ ಪ್ರಯುಕ್ತ ಕೆಲವು ದಿನಗಳಿಂದ ವಿವಿಧ ಸ್ಪರ್ಧೆಗಳು ನಡೆ–ಯುತ್ತಿದ್ದು ದಿನಾಂಕ 17/04/2025ರಂದು ಪ್ರದೀಪ್ತ ಸಾಂಸ್ಕೃತಿಕ ಸಂಘದ ವತಿಯಿಂದ ಕಾಲೇಜು ವಾರ್ಷಿಕೋತ್ಸವದ ಪ್ರಯುಕ್ತ ನಡೆದ ಕೆಲವು ಆಕರ್ಷಕ ಸ್ಪರ್ಧೆಗಳ ಚಿತ್ರಗಳು. ಗೀತ– ಚಿತ್ರ– ನೃತ್ಯ, ಡ್ರಾಮಾ ಹಾಗೂ ರೆಟ್ರೋ ಡ್ಯಾನ್ಸ್ ಸ್ಪರ್ಧೆಗಳು ನಡೆದವು.




## ಶ್ರೀರಾಮ ಕಾಲೇಜು – ಪ್ರತಿಭಾ ಪುರಸ್ಕಾರ, ಪ್ರತಿಭಾ ದಿನೋತ್ಸವ ಆಕರ್ಷ್ 2025 :

ಶ್ರೀರಾಮ ಪ್ರಥಮದರ್ಜೆ ಮಹಾವಿದ್ಯಾಲಯದ ಪ್ರದೀಪ್ತ ಸಾಂಸ್ಕೃತಿಕ ಸಂಘದ ವತಿಯಿಂದ ನಡೆಯುವ *"ಆಕರ್ಷ್ 2025"* ಪ್ರತಿಭಾ ಪುರಸ್ಕಾರ, ಪ್ರತಿಭಾ ದಿನೋತ್ಸವ ಕಾರ್ಯಕ್ರಮವು ದಿನಾಂಕ 26/04/2025ರಂದು ಆಜಾದ್ ಭವನ ಸಭಾಂಗಣದಲ್ಲಿ ನಡೆಯಿತು. ವಿವೇಕಾನಂದ ವಿದ್ಯಾವರ್ಧಕ ಸಂಘದ ಅಧ್ಯಕ್ಷರು, ಶ್ರೀರಾಮ ವಿದ್ಯಾಕೇಂದ್ರದ ಸಂಸ್ಥಾಪಕರು, ರಾಷ್ಟ್ರೀಯ ಸ್ವಯಂಸೇವಕ ಸಂಘದ ಹಿರಿಯರಾದ ಡಾ. ಪ್ರಭಾಕರ ಭಟ್ ಕಲ್ಲಡ್ಕ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ, ನಮ್ಮ ಭಾರತದೇಶ ಮತ್ತು ನಾವು ಹಿಂದೂಗಳು ಸದ್ಯ ಆಪತ್ತಿನ ಪರಿಸ್ಥಿತಿಯಲ್ಲಿದ್ದೇವೆ, ಪ್ರತಿಯೊಬ್ಬರೂ ತಮ್ಮ ಹವ್ಯಾಸ, ಪ್ರತಿಭೆ, ಬುದ್ಧಿಚಾತುರ್ಯಗಳನ್ನು ಉತ್ತಮ ರೀತಿಯಲ್ಲಿ ಉಪಯೋಗಿಸಿಕೊಂಡು ತಮ್ಮನ್ನು ದೇಶ ರಕ್ಷಣೆಗಾಗಿ ಮೀಸಲಿಟ್ಟರೆ ಮಾತ್ರ ನಮಗೆ ಉತ್ತಮ ಭವಿಷ್ಯವಿದೆ ಎಂದರು. ಪ್ರಾಚಾರ್ಯ ಶ್ರೀ ಕೃಷ್ಣ ಪ್ರಸಾದ್ ವಾರ್ಷಿಕ ಚಟುವಟಿಕೆಗಳ ವರದಿವಾಚನ ಮಾಡಿ ಮಹಾವಿದ್ಯಾಲಯದ ಇಲ್ಲಿಯವರೆಗಿನ ಸಾಧನೆಗಳನ್ನು ಪ್ರಸ್ತುತಪಡಿಸಿದರು.

ಎಕೋ ಬ್ಲಿಸ್‌ನ ಮಾಲಕ ರಾಜಾರಾಮ್ ಭಟ್ ಬಲಿಪಗುಳಿ, ಖ್ಯಾತ ಛಾಯಾಚಿತ್ರ ಗ್ರಾಹಕ ಅಪುಲ್ ಆಳ್ವ ಇರಾ ಹಾಗೂ ಗಾಯಕ, ನಿರೂಪಕ, ಯುವ ಬರಹಗಾರ ರಕ್ಷಣ್ ಮಾಡೂರು ಮುಖ್ಯ ಅತಿಥಿಗಳಾಗಿ ಆಗಮಿಸಿ ವಿದ್ಯಾರ್ಥಿಗಳ ಪ್ರತಿಭಾ ಪುರಸ್ಕಾರವನ್ನು ನೆರವೇರಿಸಿ ವಿದ್ಯಾರ್ಥಿಗಳಿಗೆ ಶುಭ ಹಾರೈಸಿದರು.

2024–2025ನೇ ಶೈಕ್ಷಣಿಕ ವರ್ಷದಲ್ಲಿ ನಡೆದ ವಿವಿಧ ಸಾಂಸ್ಕೃತಿಕ, ಕ್ರೀಡಾ ಸ್ಪರ್ಧೆಗಳಲ್ಲಿ ಬಹುಮಾನ ಗಳಿಸಿದ ಹಾಗೂ ವಿವಿಧ ಕಾಲೇಜು, ರಾಜ್ಯ– ರಾಷ್ಟ್ರ ಮಟ್ಟದ ಸ್ಪರ್ಧೆಗಳಲ್ಲಿ ವಿಜೇತರಾದ, ಅತ್ಯಧಿಕ ಅಂಕಗಳನ್ನು ಗಳಿಸಿ ವಿದ್ಯಾಲಯಕ್ಕೆ ಕೀರ್ತಿ ತಂದ ಪ್ರಸಕ್ತ ಸಾಲಿನ ಹಾಗೂ ಹಿರಿಯ ವಿದ್ಯಾರ್ಥಿಗಳಿಗೆ, 100% ಹಾಜರಾತಿ ಪಡೆದ ವಿದ್ಯಾರ್ಥಿಗಳಿಗೆ, ಕರಾಟೆಯಲ್ಲಿ ಬ್ಲಾಕ್ ಬೆಲ್ಟ್ ಪಡೆದ ವಿದ್ಯಾರ್ಥಿನಿ ಕು. ಶರಣ್ಯಾ, ತಮಿಳುನಾಡಿನ ಕಾಮರಾಜ್ ಯುನಿವರ್ಸಿಟಿಯಲ್ಲಿ ನಡೆದ ರಾಷ್ಟ್ರ ಮಟ್ಟದ NSS ಶಿಬಿರ ದಲ್ಲಿ ಮಂಗಳೂರು ಯುನಿವರ್ಸಿಟಿಯನ್ನು ಪ್ರತಿನಿಧಿಸಿದ ಕು. ಭೂಮಿಕಾ ಇವರಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ನಡೆಯಿತು. 2021–2024ನೇ ಶೈಕ್ಷಣಿಕ ವರ್ಷಗಳಲ್ಲಿ ನಡೆದ ಮಂಗಳೂರು ಯುನಿವರ್ಸಿಟಿ ವಾಣಿಜ್ಯ ವಿಭಾಗದ ಪದವಿ ಪರೀಕ್ಷೆಗಳಲ್ಲಿ 4ನೇ ರ್ಯಾಂಕ್ ಗಳಿಸಿದ ಕು. ನಿಶ್ವಿತಾ ಆಳ್ವ ಇವರನ್ನು ಸನ್ಮಾನಿಸಲಾಯಿತು.

ವೇದಿಕೆಯಲ್ಲಿ ಆಡಳಿತ ಮಂಡಳಿ ಸದಸ್ಯೆ ಶ್ರೀಮತಿ ಲಕ್ಷ್ಮೀ ರಘುರಾಜ್, ಶ್ರೀರಾಮ ವಿದ್ಯಾಕೇಂದ್ರದ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಮತ್ತು ಕಾಲೇಜಿನ ಪ್ರಾಂಶುಪಾಲ ಕೃಷ್ಣ ಪ್ರಸಾದ್ ಕಾಯರ್ ಕಟ್ಟೆ, ಉಪ ಪ್ರಾಂಶುಪಾಲೆ ಶ್ರೀಮತಿ ಸುಕನ್ಯಾ ಉಪಸ್ಥಿತರಿದ್ದರು.

ವಿದ್ಯಾರ್ಥಿಗಳಾದ ಕು. ಸ್ವಾತಿಲಕ್ಷ್ಮಿ ಸ್ವಾಗತಿಸಿ, ಕು. ದಿವ್ಯಲಕ್ಷ್ಮಿ ವಂದಿಸಿ ಕು. ಪುನೀತಾ ಕಾರ್ಯಕ್ರಮ ನಿರ್ವಹಣೆ ಮಾಡಿದರು. ಮಧ್ಯಾಹ್ನದ ನಂತರ ಸಾಂಸ್ಕೃತಿಕ ಕಾರ್ಯಕ್ರಮಗಳು ಮತ್ತು ಪ್ರತಿಭಾ ಪ್ರದರ್ಶನಗಳು ಅತ್ಯದ್ಭುತವಾಗಿ ನೆರವೇರಿದವು.

## ಸಾಂಸ್ಕೃತಿಕ ಕಾರ್ಯಕ್ರಮ


















## ಶ್ರೀರಾಮ ಪ್ರಥಮದರ್ಜೆ ಮಹಾವಿದ್ಯಾಲಯ– ಅಂತರ್ ಕಾಲೇಜು ಮಟ್ಟದ ಕಬಡ್ಡಿ ಪಂದ್ಯಾಟ: 15/04/2025

ಡಾ. ಬಿ. ಆರ್. ಅಂಬೇಡ್ಕರ್ ಜಯಂತಿ ಪ್ರಯುಕ್ತ ಕಲ್ಲಡ್ಕ ಶ್ರೀರಾಮ ಪ್ರಥಮದರ್ಜೆ ಮಹಾವಿದ್ಯಾಲಯದ ಪ್ರತಾಪ ಕ್ರೀಡಾ ಸಂಘದ ವತಿಯಿಂದ ಅಂತರ್ ಕಾಲೇಜು ಮಟ್ಟದ ಕಬಡ್ಡಿ ಲೀಗ್ (ಮ್ಯಾಟ್ ಕಬಡ್ಡಿ) ಪಂದ್ಯವು ತಾ.ರಂದು ವೇದವ್ಯಾಸ ಸಭಾಂಗಣದಲ್ಲಿ ನಡೆಯಿತು.




ವಿವೇಕಾನಂದ ವಿದ್ಯಾವರ್ಧಕ ಸಂಘದ ಅಧ್ಯಕ್ಷರು, ಶ್ರೀರಾಮ ವಿದ್ಯಾಕೇಂದ್ರದ ಸಂಸ್ಥಾಪಕರಾದ ಡಾ. ಪ್ರಭಾಕರ ಭಟ್ ಕಲ್ಲಡ್ಕ ಇವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದರು.

ರಾಷ್ಟ್ರೀಯ ಕಬಡ್ಡಿ ಆಟಗಾರ, CRPF ಯೋಧ ಶ್ರೀ ಧನರಾಜ್ ಮುಖ್ಯ ಅತಿಥಿಗಳಾಗಿ ಆಗಮಿಸಿ ಶುಭ ಹಾರೈಸಿದರು. ರಾಷ್ಟ್ರೀಯ ಕಬಡ್ಡಿ ಆಟಗಾರ ಶ್ರೀ ಧನರಾಜ್ ಅವರನ್ನು ಈ ಸಂದರ್ಭದಲ್ಲಿ ಸನ್ಮಾನಿಸಲಾಯಿತು.

ಸಮಾರೋಪ ಹಾಗೂ ಪ್ರಶಸ್ತಿ ಪ್ರದಾನ ಸಮಾರಂಭ ಕಾರ್ಯಕ್ರಮದದಲ್ಲಿ ವಿಧಾನ ಪರಿಷತ್ ಸದಸ್ಯ ಶ್ರೀ ಕಿಶೋರ್ ಕುಮಾರ್ ಬೊಟ್ಯಾಡಿ, ಕಲ್ಲಡ್ಕ ರೈತ ಸೇವಾವರ್ಧಕ ಸಂಘದ ನಿರ್ದೇಶಕ ಪ್ರಭಾಕರ ಶೆಟ್ಟಿ, ಬಿಜೆಪಿ ಯುವಮೋರ್ಚಾ ಬಂಟ್ವಾಳ ತಾಲ್ಲೂಕಿನ ಅಧ್ಯಕ್ಷ ಸಂಪತ್ ಕೋಟ್ಯಾನ್, ಹಾಗೂ ವಿದ್ಯಾಕೇಂದ್ರದ ಹಿರಿಯರಾದ ಡಾ. ಪ್ರಭಾಕರ ಭಟ್ ಕಲ್ಲಡ್ಕ, ತೀರ್ಪುಗಾರ ಶ್ರೀನಿವಾಸ್ ಗೌಡ ವಿಜೇತರಿಗೆ ಬಹುಮಾನ ವಿತರಿಸಿ ಶುಭ ಹಾರೈಸಿದರು.




ಒಂದು ದಿನದ ಈ ಕಬಡ್ಡಿ ಲೀಗ್ ನಲ್ಲಿ ಪದವಿ ಪೂರ್ವ ವಿಭಾಗದಲ್ಲಿ ಹುಡುಗಿಯರ 2 ತಂಡಗಳು ಹಾಗೂ ಹುಡುಗರ 3 ತಂಡಗಳು, ಪದವಿ ವಿಭಾಗದಲ್ಲಿ 6 ಹುಡುಗರ ತಂಡಗಳು, 4 ಹುಡುಗಿಯರ ತಂಡಗಳು ಸೇರಿ ಒಟ್ಟು 135 ವಿದ್ಯಾರ್ಥಿಗಳು ಭಾಗವಹಿಸಿದರು. ಪದವಿ ಪೂರ್ವ ವಿಭಾಗದ ಹುಡುಗಿಯರ ಮತ್ತು ಹುಡುಗರ ತಂಡಗಳಲ್ಲಿ ಶ್ರೀ ರಾಮಕುಂಜೇಶ್ವರ ಪದವಿ ಪೂರ್ವ ಕಾಲೇಜಿನ ತಂಡಗಳು ಪ್ರಥಮ ಬಹುಮಾನ, ಪದವಿ ವಿಭಾಗದ ಹುಡುಗರ ತಂಡಗಳಲ್ಲಿ ಸರಕಾರಿ ಪ್ರಥಮ ದರ್ಜೆ ಕಾಲೇಜು ಬೆಟ್ಟಂಪಾಡಿಯ ತಂಡವು ಪ್ರಥಮ ಬಹುಮಾನ ಹಾಗೂ ಹುಡುಗಿಯರ ತಂಡಗಳಲ್ಲಿ ವಿವೇಕಾನಂದ ಕಾಲೇಜಿನ ತಂಡ ಪ್ರಥಮ ಬಹುಮಾನ ಪಡೆದಿದ್ದು ಸಮಾರೋಪದ ಸಂದರ್ಭದಲ್ಲಿ ವಿಜೇತ ತಂಡಗಳಿಗೆ ಪ್ರಥಮ, ದ್ವಿತೀಯ, ತೃತೀಯ ಬಹುಮಾನಗಳನ್ನು ಹಾಗೂ ಇನ್ನಿತರ ವೈಯಕ್ತಿಕ ಬಹುಮಾನಗಳನ್ನು ಗಣ್ಯರು ಹಸ್ತಾಂತರಿಸಿದರು.




ವಿದ್ಯಾಕೇಂದ್ರದ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಹಾಗೂ ಕಾಲೇಜು ಪ್ರಾಚಾರ್ಯ ಶ್ರೀ ಕೃಷ್ಣಪ್ರಸಾದ್ ಕಾಯರ್‌ಕಟ್ಟೆ ಗಣ್ಯರನ್ನು ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿದರು. ತೀರ್ಪುಗಾರರಾಗಿ ಆಗಮಿಸಿದ ಶ್ರೀ ಮನೋಹರ್ ಕೆದಿಲ, ಅರವಿಂದ ಕಖಿ, ದೀಪಕ್ ಪೆರಾಜೆ ಹಾಗೂ ಉಪ ಪ್ರಾಂಶುಪಾಲ ಯತಿರಾಜ್ ಪೆರಾಜೆ, ಕ್ರೀಡಾ ಸಂಘದ ನಿರ್ದೇಶಕ ಪ್ರಶಾಂತ್ ಸೋಮಯಾಜಿ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಸಭಾ ಕಾರ್ಯಕ್ರಮದ ನಂತರ ಡಾ. ಬಿ ಆರ್ ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸುವ ಮೂಲಕ ಕಾರ್ಯಕ್ರಮ ಚಾಲನೆಗೊಂಡಿತು.







## ವಿಶೇಷ ತರಗತಿಗಳ ಆರಂಭ

ದಿನಾಂಕ 10.03.2025ರಿಂದ ದ್ವಿತೀಯ ಪಿ.ಯು.ಸಿ ವಿಜ್ಞಾನ ವಿಭಾಗದ ವಿದ್ಯಾರ್ಥಿಗಳಿಗೆ ಎರಡು ತಿಂಗಳ ವಿಶೇಷ ತರಗತಿ ಹಾಗೂ ದಿನಾಂಕ 21.3.2025ರಂದು **Science Integrated Batch** ನ ತರಗತಿಗಳನ್ನು ಆರಂಭಿಸಲಾಯಿತು.

ಶುಭಕೋರುವ :

**ಶ್ರೀರಾಮ ಸೌಹಾರ್ದ ಸಹಕಾರಿ ನಿಯಮಿತ**

ಪ್ರಧಾನ ಕಚೇರಿ: ಹನುಮಾನ್ ನಗರ ಕಲ್ಲಡ್ಕ ಬಂಟ್ವಾಳ ತಾಲೂಕು 574222 ದೂ: 08255 275173, 275373

ಶಾಖೆ : ಶ್ರೀರಾಮ ವಾಣಿಜ್ಯ ಸಂಕೀರ್ಣ ರಾಮನಗರ ಕಲ್ಲಡ್ಕ

ಕಲ್ಲಡ್ಕ ಶ್ರೀರಾಮ ವಾಣಿಜ್ಯ ಸಂಕೀರ್ಣದ ರಾಮ ನಗರ ಶಾಖೆಯಲ್ಲಿ E-Stamping ಠಸೆ ಕಾಗದ ಸೌಲಭ್ಯವಿದೆ

ಸಾಲ ಸೌಲಭ್ಯಗಳು

| | |
|---|---|
| ಚಿನ್ನಾಭರಣ ಸಾಲ | – 11% |
| ಜಾಮೀನು ಸಾಲ | – 16.5% |
| ಅಡವು ಸಾಲ | – 13.5% |
| ವಾಹನ ಸಾಲ | – 12% |
| ಗೃಹ ನಿರ್ಮಾಣ ಸಾಲ | – 11.5% |

ಠೇವಣಿ ಮೇಲೆ ಆಕರ್ಷಕ ಬಡ್ಡಿ ದರಗಳು

| | |
|---|---|
| 91ದಿನಗಳವರೆಗೆ | – 7% |
| 92ರಿಂದ 181 ದಿನಗಳು | – 7.5% |
| 182 ರಿಂದ 364 ದಿನಗಳು | – 8.5% |
| 1 ವರ್ಷ ಮತ್ತು ಮೇಲ್ಪಟ್ಟು | – 9.5% |

ಸೌಲಭ್ಯ

ಆವರ್ತನ ಠೇವಣಿ (R.D)
ಸಂಚಯ ಠೇವಣಿ (S.D)
ನಿರಂತರ ಠೇವಣಿ (ಪಿಗ್ಮಿ)

ಹಿರಿಯ ನಾಗರಿಕರಿಗೆ ಮಾಜಿ ಯೋಧರಿಗೆ ಮತ್ತು ವಿಧವೆಯರಿಗೆ 0.5% ಬಡ್ಡಿ ಹೆಚ್ಚಿಗೆ ನೀಡಲಾಗುವುದು.

Postal Regn No. PTR/136/2025-27 Licensed to Post without pre-payment License No: SK/WPP/PTR/117/2025-27

ಸರಯೂ

KARKAN/2014/62363
Posted at Kalladka P.O.
on 10th and 15th of
Every month

Vol. : 11 Issue : 12 Rs. 10/-

SRI RAMA VIDYAKENDRA TRUST (R.) Hanuman Nagar, Kalladka,
Bantwal Tq., Dakshina Kannada, Karnataka 574 222
Website : www.shriramakalladka.in, www.srvk.org E-mail : info@srvk.org

BOOK POST

ಸವಿಧೇ,

Sarayu Kannada Monthly Edited and Published and Printed by B. Narayana Somayaji on behalf of Sri Rama Vidyakendra Trust, Hanuman Nagara, Kalladka, Bantwal Tq, Dakshina Kannada - 574 222. Phone : 9449728763. Printed at Digantha Mudrana Ltd. Mangaluru 575008, Bantwal Tq., Dakshina Kannada, Karnataka. Registration No. : KARKAN/2014/62363